ರಾಜ್ಯದಲ್ಲಿರುವ ವಾಲೀಕಾರರ ತರುವಾಯ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ತೊಂದರೆ

538 (580) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:- (ಸೇಡ್ರಂ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೊದಲು ವಾಲೀಕಾರರಾಗಿದ್ದು ಈಗ ಸರ್ಕಾರದಮತಿಯಿಂದ ಗ್ರಾಮ ಸೇವಕರೆಂದು ನೇಮಕಗೊಂಡಂತಹವರ ಕೆಲಸ ಕೇವಲ ಕಂದಾಯ ಇಲಾಖೆಗೆ ಸೀಮಿತ ಗೊಂಡಿರುವುದೇ?

ಆ) ಮೊದಲಿನ ವಾಲೀಕಾರರಿಗೆ 3-6 ರೂಪಾಯಿ ಕೊಟ್ಟರೆ ಎಲ್ಲಾ ಇಲಾಖೆಯ ಕೆಲಸವನ್ನು ನಿರ್ವಹಿಸುತ್ತಿದ್ದು ಈಗಿನ ಗ್ರಾಮ ಸಹಾಯಕರಿಗೆ 600 ರೂಪಾಯಿ ಕೊಟ್ಟರೂ ಸಹಾ ಎಲ್ಲಾ ಇಲಾಖೆಯ ಜವಾಬ್ದಾರಿಯನ್ನು ವಹಿಸದಿರಲು ಕಾರಣವೇನು?

ಇ) ಗ್ರಾಮಾಂತರ ಪ್ರದೇಶದಲ್ಲಿ ಯಾವುದೇ ಇಲಾಖೆಯ ಅಧಿಕಾರಿವರ್ಗದವರಿಗೆ ಏನಾದರೂ ಮಾಹಿತಿ ಹಾಗೂ ಸಹಾಯ ಬೇಕಾದರೆ ವಾಲೀಕಾರರ ನಂತರ ಬಹಳ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದನ್ನು ಸರಿಪಡಿಸಲು ಈಗಲಾದರೂ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಗ್ರಾಮ ಸಹಾಯಕರು ಸಹಾಯ ನೀಡುವ ವ್ಯವಸ್ಥೆ ಮಾಡುವರೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಸಚಿವರು)

ಅ) ಇಲ್ಲ.

ಆ) ಇವರು ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗರಿಗೆ ಸಹಾಯ ಮಾಡುವುದು ಮತ್ತು ಇತರೆ ಇಲಾಖೆಯ ಅಧಿಕಾರಿಗಳ ಪ್ರದೇಶಗಳ ಪರಿಶೀಲನೆಯ ಪ್ರವಾಸಗಳ ಸಮಯದಲ್ಲಿಯೂ ಸಹಾ ಸಹಾಯ ಮಾಡುವುದು ಇವರ ಕರ್ತವ್ಯವಾಗಿರುತ್ತದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಸಾರ್ವಜನಿಕ ಸ್ಥಳಗಳಲ್ಲಿ ಮಾಲಿನ್ಯಕ್ಕೆ ದಂಡ

539 (924) ಶ್ರೀ ರಾಮಲಿಂಗ ರೆಡ್ಡಿ:- (ಜಯನಗರ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜನರು ಸಾರ್ವಜನಿಕ ಸ್ಥಳಗಳಲ್ಲಿ ಮಾಲಿನ್ಯ ಮಾಡುವವರ ವಿರುದ್ಧ ದಂಡ ವಿಧಿಸಲು ಸರ್ಕಾರದಿಂದ ಅಧಿಸೂಚನೆಯನ್ನು ಹೊರಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದ ಗಮನಕ್ಕೆ ಬೆಂಗಳೂರು ನಗರಗಳಲ್ಲಿ ಸಾಕಷ್ಟು ಸಾರ್ವಜನಿಕ ಶೌಚಾಲಯಗಳ ಅನುಕೂಲತೆ ಇಲ್ಲವೆಂಬುದು ತಿಳಿದಿದೆಯೇ?

ಇ) ಸರ್ಕಾರವು ಈ ಅಧಿಸೂಚನೆಯನ್ನು ಹಿಂದಕ್ಕೆ ಪಡೆದು ಬೆಂಗಳೂರು ನಗರದ ಸಾರ್ವಜನಿಕರಿಗೆ ಆಗುವ ಅನಾನುಕೂಲವನ್ನು ತಪ್ಪಿಸುವುದೇ?

ಶ್ರೀ ಬಿ. ಬಸವಲಿಂಗಪ್ಪ:- (ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು)

ಅ) ಹೊರಡಿಸುವ ಹಂತದಲ್ಲಿದೆ.

ಆ) ಇದೆ.

ಇ) ಉದ್ಭವಿಸುವುದಿಲ್ಲ.